## ದುರಭ್ಯಾಸದಿಂದ ದುರ್ಭರ ಜೀವನ

**ರಾಜೇಶ್ (ಹೆಸರು ಬದಲಿಸಿದೆ)** ಒಬ್ಬ ಮೇಧಾವಿ ಎಂಜನಿಯರಿಂಗ್ ವಿದ್ಯಾರ್ಥಿ. ಮೊದಲ ಎಂಟು ತಿಂಗಳು ಓದಿನಲ್ಲಿ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಬೆರಗು ಮೂಡಿಸುವಷ್ಟು ಪ್ರತಿಭೆಯನ್ನು ತೋರಿದ. ಅನಂತರ ಮುಂದಿನ ತರಗತಿಯವರು ಏರ್ಪಡಿಸಿದ್ದ ಪಾರ್ಟಿಗೆ ಹೋದ. ಅಲ್ಲಿ ಮದ್ಯ, ಮಾದಕ ವಸ್ತುಗಳ ಹೊಳೆ ಹರಿಯುತ್ತಿತ್ತು. ಅವೆಲ್ಲವೂ ಉಚಿತವಾಗಿಯೇ ದೊರೆತವು. ಅಲ್ಲಿಂದ ಅವನ ಅವನತಿ ಆರಂಭವಾಯಿತು. ಎಷ್ಟು ಪ್ರಯತ್ನಪಟ್ಟರೂ ಅವನಿಗೆ ಮಾದಕವಸ್ತುಗಳ ಸೇವನೆಯ ದುರಭ್ಯಾಸವನ್ನು ಬಿಡಲು ಸಾಧ್ಯವಾಗಲಿಲ್ಲ. ನಿತ್ರಾಣನಾಗಿ ಹೋದ ಅವನು ಪರೀಕ್ಷೆಯನ್ನೂ ತಪ್ಪಿಸಿಕೊಂಡ. ಅವನತಿಯ ಕಡೆಯ ಹಂತ ತಲುಪಿ, ಕಾಲೇಜಿನಿಂದ, ಮನೆಯಿಂದಲೂ ಕೂಡ ಹೊರದೂಡಲ್ಪಟ್ಟು, ಈಗ ಭಿಕಾರಿಯಂತೆ ಕಾಲೇಜಿನ ಕ್ಯಾಂಪಸ್‌ನ ಆಸುಪಾಸಿನಲ್ಲಿಯೇ ತಿರುಗಾಡುತ್ತಿದ್ದಾನೆ.

ಇದು ಜನವರಿ ೩೦, ೨೦೦೫ರ **ವಿಜಯ್ ಟೈಮ್ಸ್**, ತನ್ನ ವಿಶೇಷ ಪುರವಣಿಯಲ್ಲಿ ಪ್ರಕಟಿಸಿದ ಸತ್ಯಕಥೆ. ಮದ್ಯ ಮತ್ತು ಮಾದಕ ವಸ್ತುಗಳ ಸೇವನೆಯು ನಮ್ಮ ಯುವಜನರಲ್ಲಿ ಕಾಳ್ಗಿಚ್ಚಿನಂತೆ ಹಬ್ಬುತ್ತಿರುವುದನ್ನು ನಿದರ್ಶನಗಳ ಮೂಲಕ ಪತ್ರಿಕೆಯಲ್ಲಿ ನೀಡಲಾಗಿದೆ. ಈ ದುರಭ್ಯಾಸಕ್ಕೆ ಪ್ರವೇಶದ್ವಾರ ತೆರೆದಿದೆಯೇ ಹೊರತು, ಅದರಿಂದ ಬಿಡಿಸಿಕೊಂಡು ಹೊರಬರುವ ದಾರಿಗಳು ಬಹುತೇಕ ಮುಚ್ಚಿಹೋಗಿರುತ್ತವೆ. ಅಪಾಯದ ಅರಿವು ಗೊತ್ತಾಗುವುದರೊಳಗೆ ದುಶ್ಚಟಗಳು ವ್ಯಕ್ತಿಯ ಜೀವನವನ್ನು ನಿಸ್ತೇಜವನ್ನಾಗಿ ಮಾಡಿರುತ್ತದೆ.

ಇನ್ನೊಂದು ಅತ್ಯಂತ ಆಘಾತಕಾರಿ ಸಂಗತಿಯೆಂದರೆ ಬೆಂಗಳೂರು ಮದ್ಯ ಮತ್ತು ಮಾದಕವಸ್ತುಗಳ ಸರಬರಾಜಿನ ಮುಖ್ಯ ಕೇಂದ್ರವಾಗಿದೆ ಎನ್ನುವುದು. ವಿಜಯ್ ಟೈಮ್ಸ್ ಪತ್ರಿಕೆ ತನ್ನ ಮೂಲಗಳಿಂದ ಬೆಂಗಳೂರಿನ ಯಾವ್ಯಾವ ಬಡಾವಣೆಗಳಲ್ಲಿ ಈ ದಂಧೆ ನಡೆಯುತ್ತಿದೆ ಎನ್ನುವುದನ್ನೂ ಗುರುತಿಸುವ ಪ್ರಯತ್ನ ಮಾಡಿದೆ. ಕೇವಲ ಪಾನಕೂಟಗಳಾಗಿದ್ದ ಪಾರ್ಟಿಗಳು ಈಗ ಹೇಗೆ ಮಾದಕ ವಸ್ತುಗಳ ಕೂಟವೂ ಆಗುತ್ತಲಿವೆ ಎನ್ನುವುದನ್ನು ನಿದರ್ಶನಗಳ ಮೂಲಕ ಪ್ರಸ್ತುತಪಡಿಸಿದೆ. ಏತಕ್ಕೆ ಮತ್ತು ಹೇಗೆ ಯುವಜನರು ಮಾದಕವ್ಯಸನಿಗಳಾಗುತ್ತಿದ್ದಾರೆ ಎನ್ನುವ ವಿವರಣೆಯೂ ಇದೆ. ಇನ್ನೊಂದು ದುರದೃಷ್ಟಕರ ಸಂಗತಿಯೆಂದರೆ ಇತರ ರಾಜ್ಯಗಳಲ್ಲಿರುವ ವ್ಯಸನಿಗಳು ಕೂಡ ಮಾದಕ ವಸ್ತುಗಳ ಸುಗಮ ಸರಬರಾಜಿಗೆ ಬೆಂಗಳೂರಿನಲ್ಲಿರುವ ದಂಧೆಯವರನ್ನು ಆಶ್ರಯಿಸಿದ್ದಾರಂತೆ.

ಡಾ. ಜೀವ ವಿಕ್ಟರ್ ಎನ್ನುವ ಮಾನಸಿಕ ಶಾಸ್ತ್ರಜ್ಞರ ಪ್ರಕಾರ ವಿಪರೀತ ಇಂದ್ರಿಯಸುಖಾಭಿಲಾಷೆ, ಹೊಸ ಅನುಭವವನ್ನು ಪಡೆಯುವ ಕಾತರ ಮುಂತಾದ ಮನೋವೈಜ್ಞಾನಿಕ ಅಂಶಗಳು ಯುವಕರನ್ನು ಮಾದಕವಸ್ತುಗಳ ದಾಸರಾಗುವಂತೆ ಮಾಡುತ್ತವೆ. ಇದರಲ್ಲಿ ವಂಶಾವಳಿಯ ಪ್ರಭಾವವೂ ಇದೆ ಎನ್ನುತ್ತಾರೆ ಅವರು.

ಇದೆಲ್ಲಕ್ಕಿಂತ ಹೆಚ್ಚಾಗಿ ಮನೆ ಮತ್ತು ಶಾಲಾ ಕಾಲೇಜುಗಳ ವಾತಾವರಣ ದುಶ್ಚಟಕ್ಕೆ ಮುಖ್ಯ ಕಾರಣವಾಗುತ್ತದೆ. ಉತ್ತಮ ಪರಿಸರವನ್ನು ಸೃಷ್ಟಿಸುವಲ್ಲಿ ಮತ್ತು ವಿದ್ಯಾರ್ಥಿಗಳಿಗೆ ಮದ್ಯ ಮತ್ತು ಮಾದಕ ವ್ಯಸನದ ಬಗ್ಗೆ ಸಮಯೋಚಿತ ಎಚ್ಚರಿಕೆ ಕೊಡುವಲ್ಲಿ ಶಿಕ್ಷಣ ಸಂಸ್ಥೆಗಳ ಮತ್ತು ತಂದೆತಾಯಿಗಳ ಪಾತ್ರ ಹಿರಿದು. ಆಧುನಿಕ ಕಾಲದ ವಿಪರೀತ ಒತ್ತಡದ ಜೀವನ ದುಶ್ಚಟಗಳಿಗೆ ಕಾರಣವಾಗಬಹುದು. ಅದಕ್ಕೆ ಸಮಾಜ ಪರಿಹಾರ ಕಂಡುಕೊಳ್ಳದ ಹೊರತು, ಈ ಪಿಡುಗು ನಿಲ್ಲದು. ✡




## ಸುನಾಮಿ ಒಡ್ಡಿದ ಸವಾಲುಗಳು

**ಶ್ರೀರಾಮಕೃಷ್ಣರು** ನಾಮ ನಾಮಿಗಳಲ್ಲಿ ಭೇದವಿಲ್ಲ ಎಂದು ಹೇಳುತ್ತಾರೆ. ಸುನಾಮಿಯ ಮಟ್ಟಿಗಂತೂ ಅದು ಸತ್ಯ. ಅದು ಕೇವಲ ೫ ನಿಮಿಷಗಳಲ್ಲಿ ಮಾಡಿದ ಅನಾಹುತ, ಮೂರು ಲಕ್ಷ ಜನರ ಸಾವಿಗೆ ಕಾರಣವಾಗಿದ್ದರೆ, ಅದಕ್ಕೂ ಬಹುಪಟ್ಟು ಜನರ ಮನಸ್ಸಿನಲ್ಲಿ ಸುನಾಮಿಯ ನಾಮವೇ ವಿಪರೀತ ಭಯವನ್ನುಂಟುಮಾಡಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಮಾನಸಿಕವಾಗಿ, ವೈಜ್ಞಾನಿಕವಾಗಿ ಕೂಡ ಮನುಕುಲಕ್ಕೆ ದೊಡ್ಡದೊಂದು ಸವಾಲನ್ನು ಒಡ್ಡಿದೆ ಈ ಸುನಾಮಿ. ಅದನ್ನು ಎದುರಿಸಲು ನಾವು ಶಕ್ತರೇ?

ಟೈಮ್ಸ್ ವಾರಪತ್ರಿಕೆಯ ಪ್ರಕಾರ ಸುನಾಮಿ ಅಂಡಮಾನ್ ದ್ವೀಪ ಸಮೂಹವನ್ನು ಭೌಗೋಳಿಕವಾಗಿ ಜರ್ಜರಿತಗೊಳಿಸಿದ್ದೇ ಅಲ್ಲದೆ ಆರ್ಥಿಕವಾಗಿ ಐದು ವರ್ಷ ಹಿಂದೆ ಸರಿಯುವಂತೆ ಮಾಡಿದೆ. ತಮಿಳುನಾಡಿನ ಮೀನುಗಾರಿಕೆಗೆ ೧ ಬಿಲಿಯನ್ ಡಾಲರ್ ನಷ್ಟು ನಷ್ಟವಾಗಿದೆ. ಇಂಡೋನೇಷಿಯಾ ಮತ್ತು ಶ್ರೀಲಂಕೆಗಳ ಆರ್ಥಿಕ ಆಕಾಂಕ್ಷೆಗಳೆಲ್ಲ ಮಣ್ಣುಪಾಲಾಗಿವೆ. ಥೈಲ್ಯಾಂಡಿನ ವಾಣಿಜ್ಯ ವ್ಯವಹಾರಗಳಲ್ಲಿ ೭೭೦ ಮಿಲಿಯನ್ ಡಾಲರು ನಷ್ಟವಾಗಬಹುದೆಂದು ಅಂದಾಜು ಮಾಡಲಾಗಿದೆ. ಸುನಾಮಿಯು ಮೀನುಗಾರಿಕೆ ಮತ್ತು ಪ್ರವಾಸೋದ್ಯಮಗಳಿಗೆ ಮಾಡಿರುವ ಹಾನಿ ಅಸದಳ. ಅದನ್ನು ಸರಿದೂಗಿಸಬೇಕಾದರೆ ವರ್ಷಗಳೇ ಬೇಕಾಗುತ್ತವೆ.

ಇದರಿಂದ ಉದ್ಭವಿಸಿರುವ ಸಾಮಾಜಿಕ ಸವಾಲು ಇನ್ನೂ ಭೀಕರವಾಗಿವೆ. ಲಕ್ಷಾಂತರ ಕುಟುಂಬಗಳು ತಮ್ಮ ಆಪ್ತರನ್ನು ಕಳೆದುಕೊಂಡು ದುಃಖಸಂತಪ್ತವಾಗಿದ್ದರೆ, ಲೆಕ್ಕವಿಲ್ಲದಷ್ಟು ಹಸುಳೆಗಳು ಅನಾಥವಾಗಿದ್ದಾರೆ. ಅವರ ಪುನರ್ವಸತಿ ಹೇಗೆ? ಅನ್ನದಾತರನ್ನು ಕಳೆದುಕೊಂಡ ಕುಟುಂಬಗಳಿಗೆ ಭದ್ರತೆ ಯಾವ ರೀತಿಯಲ್ಲಿ ಆದೀತು? ಇವುಗಳಿಗೆ ಉತ್ತರವನ್ನು ಯಾರು ತಾನೇ ಕೊಟ್ಟಾರು?

ಒಡೆದ ಕುಟುಂಬಗಳಿಗಿಂತ ಭಯಾನಕವಾದದ್ದು ಮುರಿದ ಮನಗಳು ಮತ್ತು ಸಂತಪ್ತ ಹೃದಯಗಳು. ಸಾವಿರಾರು ಮಕ್ಕಳು ಮತ್ತು ದೊಡ್ಡವರು ಸುನಾಮಿಯ ಶಾಕ್‌ನಿಂದ ಇನ್ನೂ ಚೇತರಿಸಿಕೊಂಡಿಲ್ಲ. ಅವರಿಗೆ ಬೇಕಾದದು ದಯಾಪೂರಿತ ಸಾಂತ್ವನ ಮತ್ತು ನುರಿತ ಮಾನಸಿಕ ಸಲಹೆ. ಅದನ್ನು ಬೃಹತ್ ಪ್ರಮಾಣದಲ್ಲಿ ಯಾರು ಮತ್ತು ಹೇಗೆ ಮಾಡುತ್ತಾರೆ?

ವೈಜ್ಞಾನಿಕ ಸವಾಲುಗಳೂ ಮತ್ತಷ್ಟು ಗಂಭೀರವಾದುದು. ಸುಮಾರು ೫,೦೦೦ ಮೈಲುಗಳಷ್ಟು ಪಯಣಿಸಿ, ಇಂಡೋನೇಷಿಯಾದಿಂದ ಸೊಮಾಲಿಯಾದವರಿಗೆ ಹಾನಿಯನ್ನುಂಟುಮಾಡಿದ ಸುನಾಮಿ ಅಲೆಗಳು ಹಿಂದೂ ಮಹಾಸಾಗರದಲ್ಲಿ ಉಂಟಾಗಬಹುದೆಂಬ ಅಂದಾಜು ಕೂಡ ವಿಜ್ಞಾನಿಗಳಿಗೆ ಇರಲಿಲ್ಲ ಎಂದರೆ ಎಂತಹ ಆಶ್ಚರ್ಯ! ಅಮೆರಿಕ ತನ್ನ ರಕ್ಷಣೆಗಾಗಿ ಪೆಸಫಿಕ್ ಸಾಗರದಲ್ಲಿ ಮಾಡಿಕೊಂಡ ಎಚ್ಚರಿಕೆಯ ವ್ಯವಸ್ಥೆಯನ್ನು ಹಿಂದೂ ಮಹಾ ಸಾಗರದಲ್ಲೂ ಏಕೆ ಮಾಡಿರಲಿಲ್ಲ? ಇಲ್ಲಿನ ದೇಶಗಳು ಬಡ ದೇಶಗಳು ಎಂಬ ಅಸಡ್ಡೆಯೇನೋ?!

ಧಾರ್ಮಿಕವಾಗಿಯೂ ತಾತ್ವಿಕವಾಗಿಯೂ ಸುನಾಮಿ ಜನರ ಮನಸ್ಸಿನಲ್ಲಿ ಗೊಂದಲವನ್ನು ಸೃಷ್ಟಿಸಿದೆ. ಬಿಷಪ್ ಒಬ್ಬರು ಇದರಲ್ಲಿ ದೇವರ ಕೈವಾಡವಿದೆ ಎಂದಿದ್ದಾರೆ. ತಮಿಳುನಾಡಿನ ಇತ್ತೀಚಿನ ಕೆಲವು ಘಟನೆಗಳಿಗೆ **ದೇವರ ಪ್ರತೀಕಾರ** ಇದು ಎನ್ನುತ್ತಾರೆ ಮತ್ತೆ ಕೆಲವರು. ದೇವರಿದ್ದರೆ ಹೀಗೇಕೆ ಎಂದು ಕೇಳುವವರು ಇನ್ನೂ ಕೆಲವರು.

ಒಂದು ಮಾತ್ರ ಸತ್ಯ. ಪ್ರಕೃತಿ ಮತ್ತೊಮ್ಮೆ ಮನುಷ್ಯನ ಮೇಲೆ ತನ್ನ ಸಾರ್ವಭೌಮತ್ವವನ್ನು ಸಾಧಿಸಿದೆ. ಅದನ್ನು ಅವನು ಒಪ್ಪಿಕೊಳ್ಳುವನೇ? ✡